# ನೈತಿಕತೆ ಉಳಿಸಿಕೊಂಡರೆ ಟ್ರ್ಯಾಪ್ ಆಗಲು ಸಾಧ್ಯವಿಲ್ಲ



**ಇತರ** ವಂಚನೆಗಳಂತೆಯೇ ಹನಿ ಟ್ರ್ಯಾಪ್ ಕೂಡ ಒಂದು ವಂಚನೆ. ಆದರೆ, ಇಲ್ಲಿ ವ್ಯಕ್ತಿ ತನ್ನ ವೈಯಕ್ತಿಕ ನೈತಿಕತೆ ಉಳಿಸಿಕೊಂಡರೆ ಟ್ರ್ಯಾಪ್ ಆಗಲು ಸಾಧ್ಯವೇ ಇಲ್ಲ ಎಂದು ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ. ಕೃಷ್ಣಕಾಂತ ಹೇಳುತ್ತಾರೆ. 'ಹನಿ ಟ್ರ್ಯಾಪ್' ಕುರಿತು 'ಸುಧಾ' ಜೊತೆ ಮಾತನಾಡಿದ ಅವರು ಕಾನೂನಿನ ದೃಷ್ಟಿಯಿಂದ ಆ ಬಗ್ಗೆ ಮಾಹಿತಿ ಹಂಚಿಕೊಂಡರು.

● 'ಹನಿ ಟ್ರ್ಯಾಪ್'ಗೆ ತುತ್ತಾಗುವವರು ಯಾರು?

ಸಮಾಜದಲ್ಲಿ ಪ್ರಭಾವಿಗಳು, ಸರ್ಕಾರಿ ನೌಕರರು, ಉದ್ಯಮಿಗಳು ಹನಿ ಟ್ರ್ಯಾಪ್‌ಗೆ ಹೆಚ್ಚಾಗಿ ಒಳಗಾಗಿದ್ದಾರೆ. ಈ ಜಾಲಕ್ಕೆ ಬಿದ್ದವರು ಮರ್ಯಾದೆ ಅಥವಾ ಜೀವಕ್ಕೆ ಅಂಜಿ ಹಣವನ್ನೋ ಅಥವಾ ಪ್ರಮುಖ ದಾಖಲೆಯನ್ನೋ ನೀಡುವುದುಂಟು.

● ಹನಿ ಟ್ರ್ಯಾಪ್ ಕುರಿತು ಎಷ್ಟು ಪ್ರಮಾಣದ ಪ್ರಕರಣಗಳು ಠಾಣೆ ಮೆಟ್ಟಿಲೇರುತ್ತವೆ?

'ಹನಿ ಟ್ರ್ಯಾಪ್'ನ ಪ್ರತಿ ಹತ್ತು ಪ್ರಕರಣಗಳಲ್ಲಿ ಒಂದು ಪ್ರಕರಣವಷ್ಟೇ ಪೊಲೀಸರ ಗಮನಕ್ಕೆ ಬರುತ್ತದೆ. ಮರ್ಯಾದೆಯ ವಿಷಯವಾಗಿರುವುದರಿಂದ ಬಹಳಷ್ಟು ಪ್ರಕರಣಗಳಲ್ಲಿ ವಂಚಕರು ಬೇಡಿಕೆ ಇಟ್ಟಿದ್ದನ್ನು ನೀಡಿ ಕೈತೊಳೆದುಕೊಳ್ಳುವುದೇ ಹೆಚ್ಚು. ಆದರೆ ಇದು ತಪ್ಪು. ಐಪಿಸಿ 384, 386, 387ರ ಅನ್ವಯ ಇದೊಂದು ಸುಲಿಗೆ ಯತ್ನ. ಈ ಕಾಯ್ದೆಯಡಿ ಪ್ರಕರಣ ದಾಖಲಿಸಿ ಶಿಕ್ಷೆಗೆ ಒಳಪಡಿಸಲು ಸಾಧ್ಯವಿದೆ.

ಹೆಬ್ರಿ ಠಾಣೆಯ ಒಂದು ಪ್ರಕರಣದಲ್ಲಿ ಪತಿಗೆ ಗೊತ್ತಿಲ್ಲದೆ ಮಹಿಳೆಯೊಬ್ಬಳು ಬೇರೊಬ್ಬ ಪುರುಷನ ಜೊತೆ ಸೇರಿಕೊಂಡು ಅರ್ಚಕರು, ವೈದ್ಯರೊಂದಿಗೆ ಸಲಿಗೆ ಬೆಳೆಸಿದ್ದಳು. ಅವರೊಂದಿಗಿನ ಖಾಸಗಿ ದೃಶ್ಯಗಳನ್ನು ತನ್ನ ವ್ಯಾನಿಟಿ ಬ್ಯಾಗ್‌ಗೆ ಅಳವಡಿಸಿದ ಕ್ಯಾಮೆರಾದಲ್ಲಿ ದಾಖಲಿಸಿಕೊಳ್ಳುತ್ತಿದ್ದಳು. ನಂತರ ಆ ದೃಶ್ಯಗಳನ್ನು ಬಳಸಿಕೊಂಡು ಹಣಕ್ಕೆ ಬೇಡಿಕೆ ಇಡುತ್ತಿದ್ದಳು. ಬಹಳಷ್ಟು ಜನ ಅವರಿಗೆ ಹಣ ನೀಡಿದ್ದರು. ಒಬ್ಬರು ಮಾತ್ರ ಠಾಣೆಗೆ ದೂರು ಸಲ್ಲಿಸಿದ್ದರು. ದೂರಿನನ್ವಯ ಆರೋಪಿಗಳನ್ನು ಯಶಸ್ವಿಯಾಗಿ ಬಂಧಿಸಲಾಗಿತ್ತು. ಹಣ, ಕಾರು, ಮಾರಕಾಸ್ತ್ರಗಳನ್ನೂ ವಶಪಡಿಸಿಕೊಳ್ಳಲಾಯಿತು. ಇಂಥ ಬಹಳಷ್ಟು ಪ್ರಕರಣಗಳು ನಿತ್ಯ ವರದಿಯಾಗುತ್ತಲೇ ಇರುತ್ತವೆ.

● ರಾಜ್ಯದ ಯಾವ ಭಾಗದಲ್ಲಿ ಇಂಥ ಪ್ರಕರಣಗಳು ಹೆಚ್ಚಾಗಿವೆ?

ವಂಚನೆಗೆ ಇಂಥದ್ದೇ ಪ್ರದೇಶ ಎಂದೇನೂ ಇಲ್ಲ. ಎಲ್ಲಿ ಹಣವುಳ್ಳವರು ಹೆಚ್ಚಾಗಿದ್ದಾರೆ ಅಲ್ಲಿ ವಂಚನೆ ಪ್ರಕರಣ ಹೆಚ್ಚು ನಡೆಯುತ್ತವೆ. ಬೆಂಗಳೂರು, ಕರಾವಳಿ ಭಾಗಗಳು, ಬೆಳಗಾವಿ, ಮೈಸೂರು, ಇಂಥ ಕಡೆ ಹೆಚ್ಚು ನಡೆದ ಉದಾಹರಣೆಗಳಿವೆ. ಮರ್ಯಾದೆಗೆ ಅಂಜುವ ವ್ಯಕ್ತಿಗಳು ವಂಚಕರು ಕೇಳಿದ್ದನ್ನು ನೀಡಿ ಸುಮ್ಮನಾಗುತ್ತಾರೆ.

● ಹನಿಟ್ರ್ಯಾಪ್‌ಗೆ ಸಾಮಾಜಿಕ ಜಾಲತಾಣಗಳ ಬಳಕೆ ವ್ಯಾಪಕವಾಗಿದ್ದು, ಅಂಥ ಪ್ರಕರಣಗಳನ್ನು ಹೇಗೆ ಭೇದಿಸಲಾಗುತ್ತದೆ?

ಸಾಮಾಜಿಕ ಜಾಲತಾಣಗಳಲ್ಲಿ ಕಂಪ್ಯೂಟರ್ ಆಚೆ ಯಾರಿದ್ದಾರೆ ಎಂಬುದು ತಿಳಿಯದು. ಆದರೆ ಇದನ್ನು ಪತ್ತೆ ಮಾಡಲು ಪೊಲೀಸ್ ಇಲಾಖೆ ಬಳಿ ಬಹಳಷ್ಟು ತಂತ್ರಜ್ಞಾನಗಳಿವೆ. ಉದಾಹರಣೆ ಮೂಲಕ ವಿವರಿಸಬೇಕೆಂದರೆ, ಭಾರತದಿಂದ ಮಹಿಳೆಯೊಬ್ಬರು ಫ್ರಾನ್ಸ್ ಯುವಕನ ಸಂಪರ್ಕ ಬೆಳೆಸಿ ಸಲುಗೆಯನ್ನೂ ಸಂಪಾದಿಸಿದ್ದಳು. ಫ್ರಾನ್ಸ್‌ಗೆ ಬರಲು ವಿಮಾನ ಟಿಕೆಟ್ ಹಾಗೂ ಹಣವನ್ನು ಪಡೆದು ಪರಾರಿಯಾಗಿದ್ದಳು. ಈ ಪ್ರಕರಣವನ್ನು ಪೊಲೀಸರು ಯಶಸ್ವಿಯಾಗಿ ಭೇದಿಸಿದರು. ಮ್ಯಾಟ್ರಿಮೊನಿ ಸೈಟ್ ಮೂಲಕ ವರದಕ್ಷಿಣೆಯನ್ನು ಮುಂಗಡವಾಗಿ ಪಡೆದ ಪ್ರಕರಣಗಳನ್ನೂ ಇಲಾಖೆ ಯಶಸ್ವಿಯಾಗಿ ನಿರ್ವಹಿಸಿದೆ.

● ಇಂಥ ಪ್ರಕರಣಗಳನ್ನು ಬಗೆಹರಿಸಲು ಪೊಲೀಸರಿಗೆ ತರಬೇತಿ ಹೇಗಿದೆ?

ಸೈಬರ್ ತಂತ್ರಜ್ಞಾನದ ಬಗ್ಗೆ ಸಿಬ್ಬಂದಿಗೆ ಕಾಲಕಾಲಕ್ಕೆ ತರಬೇತಿ ನೀಡಲಾಗುತ್ತಿದೆ. ಅಗತ್ಯವಿದ್ದಲ್ಲಿ ಬೆಂಗಳೂರಿನಲ್ಲಿರುವ ಸಿಐಡಿ ಕಚೇರಿಗೂ ಕಳುಹಿಸಿ ಹೆಚ್ಚಿನ ತರಬೇತಿ ಕೊಡಿಸಲಾಗುತ್ತಿದೆ.

● ವಂಚನೆಗೆ ಒಳಗಾಗದಿರಲು ಜನರು ಏನು ಮಾಡಬೇಕು?

ವೈಯಕ್ತಿಕ ನೈತಿಕತೆ ಕಾಪಾಡಿಕೊಂಡರೆ ಅಷ್ಟೇ ಸಾಕು. ಆದಾಗ್ಯೂ, ಒಂದೊಮ್ಮೆ ಹನಿಟ್ರ್ಯಾಪ್‌ಗೆ ಒಳಗಾಗಿದ್ದೇ ಆದಲ್ಲಿ, ಅದನ್ನು ಮುಚ್ಚಿಟ್ಟು ನೋವು ಅನುಭವಿಸುವ ಬದಲು, ಪೊಲೀಸ್ ಅಧಿಕಾರಿಗಳಿಗೆ ಗೋಪ್ಯವಾಗಿ ವಿಷಯವನ್ನು ತಿಳಿಸುವುದು ಸೂಕ್ತ. ಇಂಥ ಪ್ರಕರಣಗಳನ್ನು ಇಲಾಖೆಯೂ ಅಷ್ಟೇ ರಹಸ್ಯವಾಗಿ ತನಿಖೆ ನಡೆಸಲಿದೆ. ಮಾಹಿತಿಯನ್ನು ಠಾಣೆಗೆ ಬಂದು ನೀಡಬೇಕೆಂದೇನೂ ಇಲ್ಲ. ಅಧಿಕಾರಿಗಳ ಇ–ಮೇಲ್‌ಗೂ ಕಳುಹಿಸಬಹುದು. ಪ್ರಕರಣ ಪೊಲೀಸರ ಗಮನಕ್ಕೆ ಬಂದರೆ ವಂಚಕರನ್ನು ಸೆರೆಹಿಡಿಯುವುದೂ ಸುಲಭ.

---

ಮಾಡಿ ಶತ್ರು ರಾಜನ ಬಳಿ ಕಳುಹಿಸುತ್ತಿದ್ದರಂತೆ. ಆಕೆಯಲ್ಲಿರುವ ವಿಷದ ಪ್ರಮಾಣ ಊಹಿಸದ ರಾಜರು, ಸೌಂದರ್ಯಕ್ಕೆ ಮಾರುಹೋಗಿ ಜೀವ ಕಳೆದುಕೊಳ್ಳುತ್ತಿದ್ದರು. ಆದರೆ ಇಂದು ಕಾಲ ಬದಲಾಗಿದೆ. ಇಲ್ಲಿ ನೇರವಾಗಿ ವಿಷಕನ್ಯೆಯ ಪ್ರವೇಶದ ಅಗತ್ಯವಿಲ್ಲ. ಕೇವಲ ಒಂದು ಮೊಬೈಲ್ ಇದ್ದರೆ ಸಾಕು. ಸಂಭಾಷಣೆಯ ಮೂಲಕ ಆರಂಭವಾಗಿ, ಹಸಿಬಿಸಿ ಸಲ್ಲಾಪದವರೆಗೂ ಮುಂದುವರೆದು, ನಂತರ ಧ್ವನಿ ಸಂಭಾಷಣೆ, ಅನಂತರ ವಿಡಿಯೊ ಚಾಟ್‌ನಲ್ಲೇ ಎಲ್ಲವನ್ನೂ ಮುಗಿಸಿಕೊಳ್ಳುವ 'ವರ್ಚುಯಲ್ ರೊಮಾನ್ಸ್' ಕೂಡಾ ಹನಿ ಟ್ರ್ಯಾಪ್‌ಗೆ ಕಾರಣವಾಗಿವೆ. ನಂತರ ಆ ಆಡಿಯೊ ವಿಡಿಯೊಗಳನ್ನೇ ಸಾಕ್ಷಿಯನ್ನಾಗಿ ಮಾಡಿಕೊಂಡು ಹಣ ಪೀಕುವ ಜನರಿದ್ದಾರೆ. ಹೆಣ್ಣನ್ನು ಮುಂದಿಟ್ಟುಕೊಂಡು ಹಣ ಮಾಡುವುದನ್ನೇ ಸಂಪಾದನೆಯ ದಾರಿಯಾಗಿಸಿಕೊಂಡವರೂ ಇದ್ದಾರೆ. ಕೆಲವೆಡೆ ಮಹಿಳೆಯೊಬ್ಬಳೇ ಜಾಲದ ಎಲ್ಲಾ ಹಂತಗಳನ್ನೂ ನಿಭಾಯಿಸಿದ ಉದಾಹರಣೆಗಳೂ ಇವೆ.

ಇಲ್ಲಿ ನಂಬಿಕೆಯೇ ಮೊದಲ ಅಸ್ತ್ರ. ಹೀಗೆ ನಂಬಿ ಕೆಟ್ಟ ರಾಜಕಾರಣಿಗಳ ಭವಿಷ್ಯ ಹಾಳಾಗಿದೆ. ಕಳೆದ ಒಂದು ದಶಕದಲ್ಲಿ ಅಂಥ ಕೆಲವು ಉದಾಹರಣೆಗಳು ನಮ್ಮ ರಾಜ್ಯದಲ್ಲೇ ನಡೆದಿವೆ.

### ಟಿಂಕರ್, ಟೈಲರ್, ಸೋಲ್ಜರ್, ಸ್ಪೈ

'ಹನಿ ಟ್ರ್ಯಾಪ್' ಪದ ಇಂಗ್ಲಿಷ್‌ನ ಜಾನ್ ಲೆ ಕೇರ್ ಅವರ 'ಟಿಂಕರ್, ಟೈಲರ್, ಸೋಲ್ಜರ್, ಸ್ಪೈ' ಎಂಬ ಕಾದಂಬರಿಯಿಂದ

**ಪುರಾಣ, ಚರಿತ್ರೆಯ ಕಥನಗಳಲ್ಲಿ 'ವಿಷಕನ್ಯೆ'ಯರ ಪ್ರಸ್ತಾಪ ಬರುತ್ತದೆ. ಸುಂದರ ಹೆಣ್ಣುಗಳಿಗೆ ನಿತ್ಯವೂ ಸ್ವಲ್ಪಸ್ವಲ್ಪವೇ ವಿಷವನ್ನು ನೀಡುತ್ತಾ ಅವರನ್ನು ವಿಷಕನ್ಯೆಯರನ್ನಾಗಿ ಮಾಡಿ ಶತ್ರು ರಾಜನ ಬಳಿ ಕಳುಹಿಸುತ್ತಿದ್ದರಂತೆ.**